## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.62/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿತರುಃ1. ತಯಾಬ್ ತಂದೆ ಅಮೀನ ಪಟೇಲ ಬೆಣ್ಣೂರ,
ವಃ 39 ವರ್ಷ, ಉಃ ಖಾಸಗಿ ಕೆಲಸ,
2. ಜಮೀರ ತಂದೆ ಅಮೀನ ಪಟೇಲ ಬೆಣ್ಣೂರ,
ವಃ 45 ವರ್ಷ, ಉಃ ಖಾಸಗಿ ಕೆಲಸ,
3. ಮಹ್ಮದ ತಾಹೇರ ತಂದೆ ಅಮೀನ ಪಟೇಲ ಬೆಣ್ಣೂರ,
ವಃ 42 ವರ್ಷ, ಉಃ ಖಾಸಗಿ ಕೆಲಸ,
4. ಸುಲೇಮಾನ ಅಮೀನ ಪಟೇಲ ಬೆಣ್ಣೂರ,
ವಃ 30 ವರ್ಷ, ಉಃ ಉರ್ದು ಶಾಲೆ ಶಿಕ್ಷಕ.
ಎಲ್ಲರೂ ಸಾಃ ಊಡಗಿ ಗ್ರಾಮ, ತಾಃ ಸೇಡಂ.

----

**ದೋ ಷಾ ರೋ ಪ ಣೆ**

ನಾನು ಶ್ರೀ ಸುನೀಲ್.ಎಸ್.ತಳವಾರ, ಬಿ.ಎ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 17-11-2020 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಸೇಡಂ ಠಾಣಾ ಹದ್ದಿಯಲ್ಲಿರುವ ಊಡಗಿ ಗ್ರಾಮದ ಬಸ್ ನಿಲ್ದಾಣದ ಮುಂದಿನ ರಸ್ತೆಯಲ್ಲಿ ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು ಚಾಸಾ.1 ನೇದ್ದವನಿಗೆ ಏ ಮಾಕೆ ಲೌಡೇ ಖಾಸಿಂ ಹಮಾರೆ ಖೇತಕೇ ಪಾಸ್ ಕ್ಯೂ ಸರ್ವೇ ಕರ್ ರಹಾ ಹೈ ಅಂತಾ ಸಾರ್ವಜನಿಕ ಸ್ಥಳದಲ್ಲಿ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 504 ಸಹವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಚಾಸಾ.1 ನೇದ್ದವನಿಗೆ ವಿನಾಕಾರಣ ಜಗಳ ತೆಗೆದು, 1 ನೇ ಆರೋಪಿ ಕೈಮುಷ್ಟಿ ಮಾಡಿ ಬಾಯಿಗೆ, ಮುಗಿಗೆ ಗುದ್ದಿ ರಕ್ತಗಾಯ ಪಡಿಸಿದ್ದು, 2 ನೇ ಆರೋಪಿ ಕಟ್ಟಿಗೆಯಿಂದ ಹೊಡೆದು ಗುಪ್ತಗಾಯ ಪಡಿಸಿದ್ದು, 3, 4 ನೇ ಆರೋಪಿತರು ಕುಸ್ತಿಗೆ ಬಿದ್ದು, ಕೈಯಿಂದ, ಕಾಲಿನಿಂದ ಹೊಟ್ಟೆಗೆ, ಬೆನ್ನಿಗೆ ಒದ್ದು ಗುಪ್ತಗಾಯಪಡಿಸಿದ್ದು, ಆ

ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.323, 324 ಸಹವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು ಚಾಸಾ.1 ನೇದ್ದವನಿಗೆ ವಿನಾಕಾರಣ ಜಗಳ ತೆಗೆದು, ಜಗಳ ಬಿಟ್ಟು ಹೋಗುವಾಗ ತುಮಾರಕೋ ಕ್ಯಾಬಿ ಹೋನೆದೋ ಖತಂ ಕರ್ತೆ ಸಾಲೇ ಅಂತಾ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.506 ಸಹವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 27-07-2023 ಪ್ರ.ದ.ನ್ಯಾದಂ. ಸೇಡಂ.